2018 ಕ.ತೀ.ವ. 663

ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿ ಶ್ರೀ ಸುಭ್ರೊ ಕಮಲ್ ಮುಖರ್ಜಿ
ಮತ್ತು
ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ರವಿ ಮಳಿಮಠ

## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಕೇಂದ್ರೀಯ ವಿಭಾಗ -ವಿರುದ್ಧ- ಜಾನ್ ಡಿ'ಸೋಜ*

ಕರ್ನಾಟಕ ಉಚ್ಚ ನ್ಯಾಯಾಲಯ ಅಧಿನಿಯಮದ 4ನೇ ಪ್ರಕರಣದ ಮೇರೆಗೆ ಸಲ್ಲಿಸಲಾದ ರಿಟ್ ಅಪೀಲು.

ಎಸ್.ಎ. ಸಂ.1/2010ರಲ್ಲಿ ಕಾರ್ಮಿಕ ನ್ಯಾಯಾಲಯ, ಬೆಂಗಳೂರು ಇವರು ನೀಡಿದ್ದ ತೀರ್ಪು ಮತ್ತು ಐತೀರ್ಪನ್ನು ಸ್ಥಿರೀಕರಿಸಿ, ರಿಟ್ ಅರ್ಜಿ ಸಂ.10271/2014ರಲ್ಲಿ ಮಾನ್ಯ ಏಕಸದಸ್ಯ ಪೀಠದ ನ್ಯಾಯಾಧೀಶರು ದಿನಾಂಕ ನವೆಂಬರ್ 21, 2014ರಂದು ನೀಡಿದ ತೀರ್ಪು ಮತ್ತು ಆದೇಶದ ವಿರುದ್ಧ ಈ ಅಪೀಲನ್ನು ಹೂಡಲಾಗಿದೆ.

ಪ್ರತ್ಯರ್ಜಿದಾರನು ಸಾರಿಗೆ ನಿಗಮದಲ್ಲಿ ನಿರ್ವಾಹಕನಾಗಿ ಕಾರ್ಯನಿರ್ವಹಿಸುತ್ತಿದ್ದನು. ಈಗಾಗಲೇ, ಕೈಗಾರಿಕಾ ವಿವಾದವು, 1ನೇ ಹೆಚ್ಚುವರಿ ಕಾರ್ಮಿಕ ನ್ಯಾಯಾಲಯ, ಬೆಂಗಳೂರು ಇವರ ಮುಂದೆ ಇತ್ಯರ್ಥದಲ್ಲಿದೆ.

ಈ ನಡುವಣ ಕಾಲದಲ್ಲಿ, ಆಪಾದಿಸಲಾದ ದುರ್ನಡತೆಯ ಮೇಲೆ, ಪೂರ್ಣ ಪ್ರಮಾಣದ ವಿಚಾರಣೆಯನ್ನು ಮಾಡಲಾಗಿದೆ. ಕಾರ್ಮಿಕ

*ರಿಟ್ ಅಪೀಲು ಸಂ. 30/2015 (ಎಲ್-ಕೆಎಸ್ಆರ್‌ಟಿಸಿ), ದಿನಾಂಕ: 14ನೇ ಜುಲೈ, 2016.

ನ್ಯಾಯಾಲಯ, ಅದರಂತೆ, ಮಾನ್ಯ ಏಕಸದಸ್ಯ ಪೀಠದ ನ್ಯಾಯಾಧೀಶರು ಸಹಾ, ಇಲಾಖಾ ವಿಚಾರಣೆಯನ್ನು, ನಿಷ್ಪಕ್ಷಪಾತವಾಗಿ ಮತ್ತು ಯುಕ್ತವಾಗಿ ನಡೆಸಲಾಗಿದೆಯೆಂದು ಅಭಿಪ್ರಾಯಪಟ್ಟಿದ್ದಾರೆ.

ದಿನಾಂಕ ಅಕ್ಟೋಬರ್ 6, 2013ರ ತೀರ್ಪು ಮತ್ತು ಐತೀರ್ಪಿನ ಮೂಲಕ, ಕಾರ್ಮಿಕ ನ್ಯಾಯಾಲಯವು, ಅಂಥ ಅರ್ಜಿಯನ್ನು ತಿರಸ್ಕರಿಸಿದೆ.

ಮಾನ್ಯ ಏಕಸದಸ್ಯ ಪೀಠ ನ್ಯಾಯಾಧೀಶರು, ಪ್ರಶ್ನಿತ ಆದೇಶದ ಮೂಲಕ ಅದನ್ನು ಸ್ಥಿರೀಕರಿಸಿದ್ದಾರೆ.

ನ್ಯಾಯಾಧಿಕರಣವು, ಕೈಗಾರಿಕಾ ವಿವಾದಗಳ ಅಧಿನಿಯಮ, 1947ರ 33(2)(ಬಿ) ಪ್ರಕರಣದ ಅಡಿಯಲ್ಲಿ ಅದರ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವಾಗ, ಈ ಹಿಂದೆ ನಮೂದಿಸಲಾದ ತತ್ವಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳುವುದು ಅಗತ್ಯವಾಗಿದೆ. ಅವರು, ಅಪೀಲು ನ್ಯಾಯಾಲಯದಂತೆ ಕಾರ್ಯನಿರ್ವಹಿಸಬಾರದು.

ಈ ಪ್ರಕರಣದಲ್ಲಿ, ಕಾರ್ಮಿಕ ನ್ಯಾಯಾಲಯವು ಅದರಲ್ಲಿ ಕಂಡುಬರುವಂತೆ, ಕೈಗಾರಿಕಾ ವಿವಾದಗಳ ಅಧಿನಿಯಮ, 1947ರ 33(2)(ಬಿ) ಪ್ರಕರಣದ ಅಡಿಯಲ್ಲಿ ಅದು ಅಧಿಕಾರ ವ್ಯಾಪ್ತಿಯನ್ನು ಮೀರಿದ್ದು, ಆದ್ದರಿಂದ, ಮಾನ್ಯ ಏಕಸದಸ್ಯ ಪೀಠದ ನ್ಯಾಯಾಧೀಶರು ಮಾಡಿದ ಆದೇಶ ಮತ್ತು ಕಾರ್ಮಿಕ ನ್ಯಾಯಾಲಯ ಮಾಡಿದ ಐತೀರ್ಪನ್ನು ರದ್ದುಪಡಿಸಲಾಗಿದೆ.

ಈ ರಿಟ್ ಅಪೀಲನ್ನು ಅಂಗೀಕರಿಸಲಾಗಿದೆ ಮತ್ತು ಮೇಲಿನ ಅಭಿಪ್ರಾಯೋಕ್ತಿಗಳ ಹಿನ್ನೆಲೆಯಲ್ಲಿ ಆ ವಿಷಯವನ್ನು ಮರುಪರಿಗಣನೆಗಾಗಿ ಕಾರ್ಮಿಕ ನ್ಯಾಯಾಲಯಕ್ಕೆ ವಿಷಯವನ್ನು ಹಿಂದಕ್ಕೆ ಕಳುಹಿಸಲಾಗಿದೆ.

*ಉಲ್ಲೇಖಿಸಲಾದ ಮೊಕದ್ದಮೆ:* **ಪ್ಯಾರಾದಲ್ಲಿ**

*1. ಏಐಆರ್ 1958 ಎಸ್‌ಸಿ 79*
*ಮಾರ್ಟಿನ್ ಬರ್ನ್ ಲಿಮಿಟೆಡ್ -ವಿರುದ್ಧ-*
*ಆರ್.ಎನ್. ಬ್ಯಾನರ್ಜಿ (ಉಲ್ಲೇ) 8*

ಅಪೀಲುದಾರನ ಪರ : ಶ್ರೀಮತಿ ಹೆಚ್.ಆರ್. ರೇಣುಕಾ – ವಕೀಲರು
ಪ್ರತ್ಯಪೀಲುದಾರನ ಪರ : ಪಕ್ಷಕಾರ ವ್ಯಕ್ತಿ ಶ್ರೀ ಜಾನ್ ಡಿ'ಸೋಜ ಇವರು ಖುದ್ದು ಹಾಜರಿರುತ್ತಾರೆ.

## ತೀರ್ಪು

**ಮುಖ್ಯ ನ್ಯಾಯಮೂರ್ತಿ ಸುಭ್ರೋ ಕಮಲ್ ಮುಖರ್ಜಿ:**

ಎಸ್.ಎ. ಸಂ.1/2010ರಲ್ಲಿ ಕಾರ್ಮಿಕ ನ್ಯಾಯಾಲಯ, ಬೆಂಗಳೂರು ಇವರು ನೀಡಿದ್ದ ತೀರ್ಪು ಮತ್ತು ಐತೀರ್ಪನ್ನು ಸ್ಥಿರೀಕರಿಸಿ, ರಿಟ್ ಅರ್ಜಿ ಸಂ.10271/2014ರಲ್ಲಿ ಮಾನ್ಯ ಏಕಸದಸ್ಯ ಪೀಠ ನ್ಯಾಯಾಧೀಶರಿಂದ ದಿನಾಂಕ 21ನೇ ನವೆಂಬರ್, 2014ರಂದು ನೀಡಿದ ತೀರ್ಪು ಮತ್ತು ಆದೇಶದ ವಿರುದ್ಧ ಈ ಅಪೀಲನ್ನು ಹೂಡಲಾಗಿದೆ.

2. ಪ್ರತ್ಯರ್ಜಿದಾರನು ಸಾರಿಗೆ ನಿಗಮದಲ್ಲಿ ನಿರ್ವಾಹಕನಾಗಿ ಕಾರ್ಯನಿರ್ವಹಿಸುತ್ತಿದ್ದನು. ಈಗಾಗಲೇ, ಕೈಗಾರಿಕಾ ವಿವಾದವು, 1ನೇ ಹೆಚ್ಚುವರಿ ಕಾರ್ಮಿಕ ನ್ಯಾಯಾಲಯ, ಬೆಂಗಳೂರು ಇವರ ಮುಂದೆ ಇತ್ಯರ್ಥದಲ್ಲಿದೆ.

3. ಈ ನಡುವಣ ಕಾಲದಲ್ಲಿ, ಆಪಾದಿಸಲಾದ ದುರ್ನಡತೆಯ ಮೇಲೆ, ಪೂರ್ಣ ಪ್ರಮಾಣದ ವಿಚಾರಣೆ ಮಾಡಲಾಗಿದೆ. ಕಾರ್ಮಿಕ ನ್ಯಾಯಾಲಯ, ಅದರಂತೆ,

ಮಾನ್ಯ ಏಕಸದಸ್ಯ ಪೀಠ ನ್ಯಾಯಾಧೀಶರು ಸಹಾ ಇಲಾಖಾ ವಿಚಾರಣೆಯನ್ನು, ನಿಷ್ಪಕ್ಷಪಾತವಾಗಿ ಮತ್ತು ಯುಕ್ತವಾಗಿ ನಡೆಸಲಾಗಿದೆಯೆಂದು ಅಭಿಪ್ರಾಯಪಟ್ಟಿದ್ದಾರೆ.

4. ಆದಾಗ್ಯೂ, ಕೈಗಾರಿಕಾ ವಿವಾದಗಳ ಅಧಿನಿಯಮ, 1947ರ ಪ್ರಕರಣ 33(2)(ಬಿ) ಅಡಿಯಲ್ಲಿ ಉದ್ದೇಶಿಸಲಾದಂತೆ, (ಸಂಕ್ಷಿಪ್ತವಾಗಿ, ಇದರಲ್ಲಿ ಇನ್ನು ಮುಂದೆ ಅಧಿನಿಯಮ ಎಂದು ಉಲ್ಲೇಖಿಸಲಾಗಿದೆ), ವಜಾಗೊಳಿಸುವ ಆದೇಶವನ್ನು ಮಾಡುವುದಕ್ಕೆ ಉದ್ಯೋಗದಾತನು ಪ್ರಸ್ತಾಪಿಸಿ, ತನ್ನಿಂದ ಕೈಗೊಳ್ಳಲಾದ ಕ್ರಮದ ಅನುಮೋದನೆಯ ಉದ್ದೇಶಕ್ಕಾಗಿ ಕಾರ್ಮಿಕ ನ್ಯಾಯಾಲಯದ ಮುಂದೆ ಉದ್ಯೋಗದಾತನು ಸಲ್ಲಿಸಿದ್ದಾನೆ.

5. ದಿನಾಂಕ ಅಕ್ಟೋಬರ್ 6, 2013ರ ತೀರ್ಪು ಮತ್ತು ಐತೀರ್ಪಿನ ಮೂಲಕ ಕಾರ್ಮಿಕ ನ್ಯಾಯಾಲಯವು, ಅಂಥ ಅರ್ಜಿಯನ್ನು ತಿರಸ್ಕರಿಸಿದೆ.

6. ಮಾನ್ಯ ಏಕಸದಸ್ಯ ಪೀಠ ನ್ಯಾಯಾಧೀಶರು, ಪ್ರಶ್ನಿತ ಆದೇಶದ ಮೂಲಕ ಅದನ್ನು ಸ್ಥಿರೀಕರಿಸಿದ್ದಾರೆ.

7. ಈ ಅಧಿನಿಯಮದ 33(2)(ಬಿ) ಪ್ರಕರಣದ ಅಡಿಯಲ್ಲಿ ವಿಚಾರಣಾ ವ್ಯಾಪ್ತಿಯು, ಬಹಳ ಕಿರಿದಾಗಿದೆ. ವಿವಾದಾಂಶವು, ಪೂರ್ವ ನಿದರ್ಶನರಹಿತ ವಿಷಯವಾಗಿ ಉಳಿದಿರುವುದಿಲ್ಲ.

8. ***ಮಾರ್ಟಿನ್ ಬರ್ನ್ ಲಿಮಿಟೆಡ್ –ವಿರುದ್ಧ– ಆರ್.ಎನ್. ಬ್ಯಾನರ್ಜಿ*** [1] ಮೊಕದ್ದಮೆಯಲ್ಲಿ ಆ ಪ್ರಕರಣದ ಅಡಿಯಲ್ಲಿ ಯಾವ ನ್ಯಾಯಾಧಿಕರಣದ ಮುಂದೆ ಅರ್ಜಿಯನ್ನು ಸಲ್ಲಿಸಲಾಗಿದೆಯೋ ಆ ನ್ಯಾಯಾಧಿಕರಣವು ಉದ್ಯೋಗದಾತ ಮತ್ತು ಕಾರ್ಮಿಕನ ನಡುವೆ ಉದ್ಭವಿಸಿದ ಯಾವುದೇ ಕೈಗಾರಿಕಾ ವಿವಾದದ ಮೇಲೆ ನ್ಯಾಯ ನಿರ್ಣಯಿಸುವಂತಿಲ್ಲ, ಆದರೆ ಕಾರ್ಮಿಕನಿಗೆ ಪ್ರತಿಕೂಲವಾಗಿ

1. ಎಐಆರ್ 1958 ಎಸ್‌ಸಿ 79

ಉದ್ಯೋಗದಾತನು ಷರತ್ತುಗಳನ್ನು ವ್ಯತ್ಯಾಸಗೊಳಿಸಿದ ವಿಷಯದಲ್ಲಿ, ಉದ್ಯೋಗದಾತನ ಮೇಲೆ ವಿಧಿಸಲಾದ ಬಹಿಷ್ಕಾರವನ್ನು ಅಥವಾ ಯಾರೇ ಕಾರ್ಮಿಕನ ವಿಮೋಚನೆ ಅಥವಾ ದಂಡನೆಯನ್ನು ವಜಾಗೊಳಿಸುವ ಮೂಲಕವಾಗಲಿ ಅಥವಾ ಅನ್ಯಥಾ ರೀತಿಯಲ್ಲಾಗಲಿ, ಉಲ್ಲೇಖಿಸಲಾದ ಅದರಲ್ಲಿನ ವ್ಯವಹರಣೆಗಳ ಇತ್ಯರ್ಥದ ಅವಧಿಯಲ್ಲಿ, ಹಿಂತೆಗೆದುಕೊಳ್ಳಲಾಗಿದೆಯೇ ಎಂಬುದನ್ನು ಮಾತ್ರ ಪರಿಗಣಿಸಬಹುದಾಗಿದೆ ಎಂದು ಭಾರತದ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ. ಮೊದಲ ನೋಟಕ್ಕೆ ಸಮ್ಮತವಾದ, ಮೊಕದ್ದಮೆಯಲ್ಲಿ ಅಂಥ ಬಹಿಷ್ಕಾರವನ್ನು ಹಿಂತೆಗೆದುಕೊಳ್ಳುವುದಕ್ಕಾಗಿ ಉದ್ಯೋಗದಾತನು ಪ್ರಯತ್ನಿಸಬಹುದಾಗಿದೆ.

9. ಮೊದಲ ನೋಟಕ್ಕೆ ಸಮ್ಮತವಾದ ವಾದವನ್ನು ಸಂಪೂರ್ಣವಾಗಿ ರುಜುವಾತುಪಡಿಸಿದ ಮೊಕದ್ದಮೆಯೆಂದು ಅರ್ಥೈಸಲಾಗದು. ಆದರೆ, ಒಂದು ಮೊಕದ್ದಮೆಯನ್ನು ಅದಕ್ಕೆ ಸಮರ್ಥನೆಯಾಗಿ ಒದಗಿಸಿರುವ ಸಾಕ್ಷ್ಯವನ್ನು ಸಾಬೀತುಪಡಿಸಿದ್ದರೆ ನಂಬಬಹುದಾಗಿದೆ. ಮೊದಲ ನೋಟದ ವಾದವನ್ನು ಸಾಬೀತುಪಡಿಸಲಾಗಿದೆಯೇ ಎಂಬುದನ್ನು ನಿರ್ಧರಿಸುವಾಗ, ಒದಗಿಸಲಾದ ಸಾಕ್ಷ್ಯದ ಆಧಾರದ ಮೇಲೆ ವಿವಾದ ಕುರಿತು ತೀರ್ಮಾನಕ್ಕೆ ಬರಲು ಸಾಧ್ಯವಿತ್ತೇ ಎಂಬುದು ಸುಸಂಗತ ನಿರ್ಣಯವಾಗುತ್ತದೆಯೇ ಹೊರತು, ಆ ಸಾಕ್ಷ್ಯದ ಆಧಾರದ ಮೇಲೆ ಅದೊಂದೇ ತೀರ್ಮಾನವಾಗಿತ್ತೇ ಎಂಬುದಲ್ಲ. ಆದಾಗ್ಯೂ, ಪ್ರಶ್ನೆಯಲ್ಲಿರುವ ತೀರ್ಪಿನ ಸಂಬಂಧದಲ್ಲಿ ತನ್ನದೇ ತೀರ್ಮಾನವನ್ನು ಅದು ಪರ್ಯಾಯವಾಗಿಸುವಂತಿಲ್ಲ. ದಾಖಲೆಯಲ್ಲಿರುವ ಸಾಕ್ಷ್ಯದ ಆಧಾರದ ಮೇಲೆ ತೆಗೆದುಕೊಂಡು ಅಭಿಪ್ರಾಯವು ಕಾರ್ಯಸಾಧ್ಯ ಅಭಿಪ್ರಾಯವಾಗಿತ್ತೇ ಎಂಬುದನ್ನು ಮಾತ್ರ ಅದು ಪರಿಗಣಿಸಬೇಕಾಗಿತ್ತು.

10. ನ್ಯಾಯಾಧಿಕರಣವು, ಈ ಅಧಿನಿಯಮದ 33(2)(ಬಿ) ಪ್ರಕರಣದ ಅಡಿಯಲ್ಲಿ ಅದರ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವಾಗ, ಈ ಹಿಂದೆ ನಮೂದಿಸಲಾದ ತತ್ವಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳುವುದು ಅಗತ್ಯವಾಗಿತ್ತು. ಅವರು, ಅಪೀಲು ನ್ಯಾಯಾಲಯದಂತೆ ಕಾರ್ಯನಿರ್ವಹಿಸಬಾರದು.

11. ಕಾರ್ಮಿಕನಾದ, ಶ್ರೀ ಜಾನ್ ಡಿ'ಸೋಜ ಇವರು ಖುದ್ದಾಗಿ ಹಾಜರಾಗಿದ್ದು, ಅವರು, ಆ ಸಂಸ್ಥೆಯಲ್ಲಿ ಭಷ್ಟಾಚಾರದ ವಿರುದ್ಧ ಹೋರಾಟ ಮಾಡಿದ್ದು, ಅವರನ್ನು ಬಲಿಪಶುವನ್ನಾಗಿ ಮಾಡಲಾಗಿದೆಯೆಂದು ಸತತವಾಗಿ ವಾದಿಸಿದ್ದಾರೆ. ಆದ್ದರಿಂದ, ಕಾರ್ಮಿಕ ನ್ಯಾಯಾಲಯ ಹಾಗೂ ಮಾನ್ಯ ಏಕಸದಸ್ಯ ಪೀಠ ನ್ಯಾಯಾಧೀಶರು, ಅನುಮೋದನೆ ನೀಡದಿರುವುದು ಸೂಕ್ತವಾಗಿದೆ.

12. ಕಾರ್ಮಿಕ ನ್ಯಾಯಾಲಯ ಹಾಗೂ ಮಾನ್ಯ ಏಕಸದಸ್ಯ ಪೀಠ ನ್ಯಾಯಾಧೀಶರು ಸಹ, ಇಲಾಖಾ ವಿಚಾರಣೆಯನ್ನು ಯುಕ್ತ ಮತ್ತು ನ್ಯಾಯಸಮ್ಮತವಾಗಿ ನಡೆಸಲಾಗಿದೆ ಎಂಬ ಸಹಮತಿಗೆ ಬಂದಿರುವ ವಿಷಯವನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕಾಗಿದೆ.

13. ಈ ಮೊಕದ್ದಮೆಯಲ್ಲಿ, ಕಾರ್ಮಿಕ ನ್ಯಾಯಾಲಯವು ಈ ಅಧಿನಿಯಮದ 33(2)(ಬಿ) ಪ್ರಕರಣದ ಅಡಿಯಲ್ಲಿ ತನ್ನ ಅಧಿಕಾರ ವ್ಯಾಪ್ತಿಯನ್ನು ಮೀರಿರುವುದು ಕಂಡುಬರುತ್ತದೆ. ಆದ್ದರಿಂದ, ಮಾನ್ಯ ಏಕಸದಸ್ಯ ಪೀಠ ನ್ಯಾಯಾಧೀಶರು ಮಾಡಿದ ಆಜ್ಞೆಯನ್ನು ಮತ್ತು ಕಾರ್ಮಿಕ ನ್ಯಾಯಾಲಯವು ನೀಡಿದ ಐತೀರ್ಪನ್ನು ರದ್ದುಪಡಿಸಲಾಗಿದೆ.

14. ನಾವು, ಈ ರಿಟ್ ಅಪೀಲನ್ನು ಅಂಗೀಕರಿಸಿದ್ದೇವೆ ಮತ್ತು ಮೇಲಿನ ನಮ್ಮ ಅಭಿಪ್ರಾಯೋಕ್ತಿಗಳ ಹಿನ್ನೆಲೆಯಲ್ಲಿ ಆ ವಿಷಯವನ್ನು ಮರುಪರಿಗಣನೆಗಾಗಿ ಕಾರ್ಮಿಕ ನ್ಯಾಯಾಲಯಕ್ಕೆ ಹಿಂದಕ್ಕೆ ಕಳುಹಿಸಲಾಗಿದೆ.

15. ಈ ಪ್ರಕರಣವು ದೀರ್ಘಕಾಲದಿಂದ ಇತ್ಯರ್ಥದಲ್ಲಿರುವುದನ್ನು ಗಮನದಲ್ಲಿರಿಸಿಕೊಂಡು, ಈ ಆದೇಶದ ಪ್ರತಿಯ ಪತ್ರ ವ್ಯವಹಾರದ ದಿನಾಂಕದಿಂದ ಎರಡು ತಿಂಗಳ ಅವಧಿಯೊಳಗೆ ಆದ್ಯತೆಯಲ್ಲಿ ಕಾರ್ಯ ಸಾಧ್ಯವಿದ್ದಷ್ಟೂ ತ್ವರಿತವಾಗಿ ಆ ವಿಷಯವನ್ನು ವಿಲೇ ಮಾಡುವಂತೆ ಕಾರ್ಮಿಕ ನ್ಯಾಯಾಲಯಕ್ಕೆ ನಾವು ಮನವಿ ಮಾಡುತ್ತೇವೆ.

16. ವೆಚ್ಚಗಳಿಗೆ ಸಂಬಂಧಿಸಿದಂತೆ ನಾವು ಯಾವುದೇ ಆದೇಶ ಮಾಡಿರುವುದಿಲ್ಲ.

---